# ಗಿಳಿಯು ಪಂಜರದೊಳಿಲ್ಲ...

ಮೂರು ತಲೆಮಾರಿನ ಕನ್ನಡಿಗರನೆಲ್ಲ ತಮ್ಮ ಅಭಿನಯದಿಂದ, ಕನ್ನಡಪರವಾದ ಅಭಿಮಾನದಿಂದ, ತಮ್ಮ ಗಂಧರ್ವ ಗಾನಸುಧೆಯಿಂದ ಸೆಳೆದುಕೊಂಡು ಕನ್ನಡದೆಡೆಗೆ, ಕರ್ನಾಟಕದೆಡೆಗೆ ಬೇರೆ ಭಾಷೆಯವರು ಅಚ್ಚರಿಯಿಂದಲೂ ಗೌರವದಿಂದಲೂ ಕತ್ತೆತ್ತಿನೋಡುವಂತೆ ಮಾಡಿದ ರಾಜ್‌ಕುಮಾರ್ ಇನ್ನಿಲ್ಲ. ನಮ್ಮೆಲ್ಲರ ಮನದಲ್ಲಿ ಕನ್ನಡ ಮನೆಯ ಹಿರಿಯರೊಬ್ಬರು ಮಣ್ಣಾದ ದುಃಖ.

ರಾಜ್‌ಕುಮಾರ್ ಹಾಡಿದ್ದ **"ವಾರ ಬಂತಮ್ಮ, ಗುರುವಾರ ಬಂತಮ್ಮ..."** ನಮ್ಮ ಮನೆಯಲ್ಲಿ ಯಾವಾಗಲೂ ಅನುರಣಿತ. ಯಾರ ಕಟ್ಟಪ್ಪಣೆಯೋ ಗೊತ್ತಿಲ್ಲ, ನಾನು ಸಣ್ಣವನಿದ್ದಾಗಿನಿಂದ ನಮ್ಮ ಚಿಕ್ಕಪ್ಪ-ದೊಡ್ಡಪ್ಪಂದಿರ ಬೇಕರಿಗಳಲೆಲ್ಲ, ನಮ್ಮ ಕ್ಯಾಂಟೀನಿನಲ್ಲೆಲ್ಲ ರಾಘವೇಂದ್ರರ ದೊಡ್ಡ ದೊಡ್ಡ ಫೋಟೋಗಳು ಜೊತೆಗೆ ರಾಜ್‌ಕುಮಾರ್ ಹಾಡಿದ ಈ ಹಾಡಿನ ಕ್ಯಾಸೆಟ್. ನಮ್ಮ ಕುಟುಂಬದ ಬೇಕರಿಗಳಷ್ಟರ ಹೆಸರುಗಳೂ ಐಯಂಗಾರ್ ಬೇಕರಿ ಅಂತಲೇ ಇದ್ದುದ್ದು. ಈಗಲೂ ನಮ್ಮ ಚಿಕ್ಕಪ್ಪಂದಿರನ್ನು ಅವರ ಸ್ನೇಹಿತರು ಕರೆಯುವುದೂ "ಅಯ್ಯಂಗಾರ್ರೇ" ಅಂತಲೇ! ಈಗ ಬೇಕರಿಗಳ ಹೆಸರುಗಳು ಬದಲಾಗಿದ್ದರೂ ಅವು ಇನ್ನೂ ಶಿವಭಕ್ತಿಯೆಡೆಗೆ ತಿರುಗಿಲ್ಲ, ಈಗಲೂ ಅವೆಲ್ಲ "ಲಕ್ಷ್ಮೀವೆಂಕಟೇಶ್ವರ, ಲಕ್ಷ್ಮೀನರಸಿಂಹ, ಜನಾರ್ದನ, ರಾಘವೇಂದ್ರ, ಶ್ರೀ ಕೃಷ್ಣ" ಬೇಕರಿಗಳೇ!

ಸಣ್ಣವನಿದ್ದಾಗ ತುಂಬ ಇಂಪಾಗಿದ್ದ, ಗುಣಗುಣಿಸಲು ಬಹಳ ಖುಷಿಕೊಟ್ಟಿದ್ದ ಈ ಹಾಡು ಕೇಳಿ, ಕೇಳಿಯೇ ನಾನು ಬಾಯಿಪಾಠ ಮಾಡಿಕೊಂಡಿದ್ದೆ ಮತ್ತು ಎರಡನೇ ತರಗತಿಯಲ್ಲಿರುವಾಗಲೊಮ್ಮೆ ಸ್ಕೂಲ್ ಯೂನಿಯನ್ ಡೇಯ ಹಾಡುಗಾರಿಕೆಯ ಸ್ಪರ್ಧೆಯಲ್ಲಿ ಇದನ್ನೇ ಹಾಡಿ ಚೆಂದದೊಂದು ಸ್ಟೀಲ್ ಬಟ್ಟಲು ಗೆದ್ದುಕೊಂಡಿದ್ದೆ.

ಬಹುಶಃ ಸಂಪತ್ತಿಗೆ ಸವಾಲ್ ಹಾಡುಗಳ ರೆಕಾರ್ಡಿಂಗ್ ಸಮಯದಲ್ಲಿ (ನಾನು ವಾರಪತ್ರಿಕೆಯೊಂದರಲ್ಲಿ ಓದಿದ್ದಂತೆ) ಅವತ್ತಿಗೆ ರಾಜ್‌ಕುಮಾರ್ ಧ್ವನಿಯೇ ಆಗಿಹೋಗಿದ್ದ ಪಿ.ಬಿ. ಶ್ರೀನಿವಾಸ್ ಅನಾರೋಗ್ಯಕ್ಕೊಳಗಾಗಿ, ಹಾಡಲೊಪ್ಪದ ರಾಜ್‌ರನ್ನು ಅವರೇ ಖುದ್ದಾಗಿ "ಇದೊಂದು ಚಿತ್ರಕ್ಕೆ ಹಾಡಿಬಿಡಿ, ಮುಂದಿನ ಚಿತ್ರಕ್ಕೆ ನಾನು ರೆಡಿ" ಎಂದು ಒತ್ತಾಯ ಮಾಡಿ ಒಪ್ಪಿಸಿ **"ಯಾರೇ ಕೂಗಾಡಲಿ, ಊರೇ ಹೋರಾಡಲಿ..."** ಹಾಡನ್ನು ಹಾಡಿಸದಿದ್ದರೆ ರಾಜ್‌ಕುಮಾರರ ಗಾನಸುಧೆ ನಮಗೆ ದಕ್ಕುತ್ತಿರಲಿಲ್ಲವೇನೋ. ನಮ್ಮ ಹಿರಿಯರೆಲ್ಲ ಹೇಳುವಂತೆ ರಾಜ್‌ರವರಿಗೆ ಪಿ.ಬಿ.ಎಸ್‌ರವರ ಧ್ವನಿಯೇ ಚೆನ್ನಾಗಿ ಹೊಂದುತ್ತಿತ್ತೆನ್ನುವುದು ನಿಜವೇ ಇದ್ದರೂ (ಹಿಂದಿಯಲ್ಲಿ ರಾಜ್‌ಕಪೂರ್‌ರ ಧ್ವನಿ-ಮುಕೇಶ್ ಆಗಿದ್ದಂತೆ) ರಾಜ್‌ರವರು ಈ ಒಂದೇ ಚಿತ್ರದಿಂದ ಆ ಹೊಂದಾಣಿಕೆಯಿಂದ ಹೊರಕ್ಕೆ ಜಿಗಿದರು, ಹಾಡುಗಾರರಾಗಿ ಎತ್ತರಕ್ಕೆ ಬೆಳೆದರು. ಆ ನಂತರ ನಿಜವಾಗಿಯೂ ರಾಜ್‌ರವರಿಗೆ ಮಾತ್ರ ಚಿನ್ನದೊಳಕ್ಕೆ ಹುದುಗಿಕೊಳ್ಳುವ ರತ್ನದಂತೆ ಹೊಂದಿಕೊಳ್ಳುತ್ತಿದ್ದ, ಹೊಂದಿಕೊಂಡು ಸುಂದರವಾದ ಆಭರಣವಾಗುತ್ತಿದ್ದ ಪಿ.ಬಿ.ಎಸ್‌ರ ಶಾರೀರಕ್ಕೆ ಯಾವ ನಟನ ಶರೀರವೂ, ನಟನೆಯೂ ಹೊಂದಿಕೊಳ್ಳಲಿಲ್ಲ.

ವರನಟ ರಾಜ್‌ರವರು ಹಾಡಿರುವ ಹಾಡುಗಳೆಲ್ಲವೂ ವೈಶಿಷ್ಟ್ಯಪೂರ್ಣವಾದವುಗಳೇ. ಅವರ ಧ್ವನಿಯ ಏರಿಳಿತಗಳ ಸರಸ-ಸಮ್ಮಿಲನವಾದ **"ಇದು ಬೊಂಬೆಯಾಟವಯ್ಯಾ..."** ಹಾಡು ಕೇಳಿದಾಗಲೆಲ್ಲ ನನ್ನ ಮುಖದಲ್ಲಿ ಹೂನಗೆಯೊಂದು ಅರಳುತ್ತದೆ. ಬಭ್ರುವಾಹನದ ಪಿ.ಬಿ.ಎಸ್. ಮತ್ತು ರಾಜ್‌ರ ಜುಗಲ್‌ಬಂಧಿಯಾದ **"ಯಾರು ತಿಳಿಯರು ನಿನ್ನ ಭುಜಬಲದ ಪರಾಕ್ರಮ"** ಅದೆಷ್ಟು ಶಾಲಾ ಮಕ್ಕಳ ಏಕಪಾತ್ರಾಭಿನಯಕ್ಕೆ ವಿಷಯವಾಗಿದೆಯೋ? ಅವರದೇ ಸಮ್ಮಿಲನದ **"ಅಮ್ಮಾ ನೀನು ನಮಗಾಗಿ, ಸಾವಿರ ವರುಷ ಸುಖವಾಗಿ..."** ನನಗಿಷ್ಟವಾದ ಇನ್ನೊಂದು ಹಾಡು. ಸಣ್ಣವನಿದ್ದಾಗ ನಾನು ಯಾವಾಗಲೂ ಹಾಡಿಕೊಳ್ಳುತ್ತಿದ್ದ ಇನ್ನೊಂದು ಮಧುರ ಗೀತೆ, **"ವಿಶ್ವನಾಥನು ತಂದೆಯಾದರೆ ವಿಶಾಲಾಕ್ಷಿ ತಾಯಿಯಲ್ಲವೇ..."**. **"ಶ್ರೀಕಂಠ... ವಿಷಕಂಠ..."** ಹಾಡಿನ ಓಘವನ್ನೊಮ್ಮೆ ಅನುಭವಿಸಿನೋಡಿ. ಜೀವನಾನುಭವದ ಪಾಠ ಹೇಳುವ **"ಬಾನಿಗೊಂದು ಎಲ್ಲೆ ಎಲ್ಲಿದೆ..."**, ಅಬ್ಬರಿಸಿ ಗರ್ಜಿಸುವ ಭಕ್ತ ಪ್ರಹ್ಲಾದದ **"ಏ ಹರೀ..."**, ಸುಮಧುರ-ಸುಲಲಿತವಾದ **"ಹಾಲಲ್ಲಾದರೂ ಹಾಕು, ನೀರಲ್ಲಾದರೂ ಹಾಕು..."**, ಗೋಕಾಕ್ ಚಳುವಳಿಯ ಹೊತ್ತಿಗೆ ಖುದ್ದು ರಾಜ್‌ರ ಧ್ಯೇಯಗಾನವಾಗಿದ್ದ (ಮಯೂರ ಚಿತ್ರದ) **"ನಾನಿರುವುದೇ**

ನಿಮಗಾಗಿ, ನಾಡಿರುವುದೇ ನಮಗಾಗಿ...", ಹೊಸಬೆಳಕು ಚಿತ್ರದ "ಬಾಳು ಬೆಳಕಾಯಿತು..." ಮತ್ತು "ಚೆಲುವೆಯೇ ನಿನ್ನ ನೋಡಲು...", ಮತ್ತು ಹಾಲುಜೇನಿನ "ಹಾಲು ಜೇನು ಒಂದಾದ ಹಾಗೆ...", "ಬೆಳದಿಂಗಳಾಗಿ ಬಾ, ತಂಗಾಳಿಯಾಗಿ ನಾನು..."... ಒಂದೊಂದು ಹಾಡೂ ಒಂದೊಂದು ಭಾವ ವಿಲಾಸದ ಕಲ್ಪನಾಲೋಕವನ್ನು ತೆರೆದು ನಮ್ಮನ್ನು ಸ್ವೈರ ವಿಹಾರಕ್ಕೆ ಎಳೆದೊಯ್ಯುತ್ತದೆ.

ಬರೀ ತಮ್ಮ ಚಿತ್ರಗೀತೆಗಳಲ್ಲದೇ ಸಾಕಷ್ಟು ಭಾವಗೀತೆಗಳನ್ನು, ಭಕ್ತಿಗೀತೆಗಳನ್ನು ಹಾಡಿರುವ ಡಾ. ರಾಜ್‌ಗೆ ಏಕೈಕ ರಾಷ್ಟ್ರಪ್ರಶಸ್ತಿ ಕೂಡಾ ನಟನೆಗಲ್ಲದೇ ಅವರ ಗಾಯನಕ್ಕೆ ಸಿಕ್ಕಿದ್ದು ಅವರ ಗಾಯನ ಪ್ರೌಢಿಮೆಗೆ ಸಂದ ಗೌರವ. ಅಷ್ಟಾಗಿ ಶಾಸ್ತ್ರೀಯ ಸಂಗೀತದ ಜ್ಞಾನವಿಲ್ಲದೇ "ನಾದಮಯ..." ಹಾಡಿ ಎಲ್ಲರನ್ನೂ ಬೆರಗುಗೊಳಿಸಿ, ಭಾವಪರವಶಗೊಳಿಸಿದವರು ನಟ ಸಾರ್ವಭೌಮ ರಾಜ್.

ಗಾನ ಗಂಧರ್ವ ರಾಜ್ ಹಾಡಿದ "ಯಾವ ಕವಿಯು ಬರೆಯಲಾರ ಒಲವಿನಿಂದ, ಕಣ್ಣೋಟದಿಂದ ಹೃದಯದಲ್ಲಿ ನೀಬರೆದ ಈ ಪ್ರೇಮಗೀತೆಯ..." ನನ್ನದೇ ಭಾವನೆಗಳ ಪ್ರತಿಧ್ವನಿ, ಯಾವಾಗ ಕೇಳಿದರೂ ನನ್ನ ಹೃದಯ ಕರಗಿ, ಕಣ್ಣು ತುಂಬಿಬರುವಂತೆ ಮಾಡುವ ಈ ಹಾಡನ್ನು ಕಲಿಯಲು ಸಕತ್ ಸರ್ಕಸ್ ಮಾಡಿದ್ದೇನೆ, ಆದರೆ ಇನ್ನೂ ಚೆನ್ನಾಗಿ ಹಾಡಬಲ್ಲೆನೆಂಬ ಭರವಸೆಬಂದಿಲ್ಲ.

ರಾಜ್ ಹಾಡುಗಾರಿಕೆಗಿರುವ ಇನ್ನೊಂದು ವೈಶಿಷ್ಟ್ಯವೆಂದರೆ ಅವರ ಧ್ವನಿ. ಬೇರೆ ಯಾವ ಗಾಯಕ ಹಾಡಿದ ಹಾಡು ಹಾಡಲಿಕ್ಕೆ ನೀವು ಹಾಡಿನ ರಾಗ-ಲಯಗಳನ್ನು ಸರಿಯಾಗಿ ಕಲಿತರೆ ಸಾಕು, ಆದರೆ ರಾಜ್‌ರ ಹಾಡು ಅವರ ಧ್ವನಿಯಲ್ಲಿ ಬಂದರೇನೇ ಪರಿಪೂರ್ಣ. ನಾದಮಯದ **"ತೋಂ ತನನ..."**ಕ್ಕೆ ಅವರ ಹೃಸ್ವರದಲ್ಲೇ ಸಾರ್ಥಕ್ಯ. ಇಲ್ಲದಿದ್ದರೆ ಹಾಡು ಎಷ್ಟೇ ಲಯಬದ್ಧವಾಗಿದ್ದರೂ ಅದು ಸಪ್ಪೆಯೇ. ಅದಕ್ಕಾಗಿಯೇ ಎಲ್ಲ ಆರ್ಕೆಸ್ಟ್ರಾಗಳಲ್ಲೂ ಬೇರೆ ಗಾಯಕರ ಹಾಡುಹಾಡಲಿಕ್ಕೆ ಬೇರೆ ಗಾಯಕರು, ಬರೀ ರಾಜಕುಮಾರ್‌ರ ಹಾಡು ಹಾಡಲಿಕ್ಕೇ ಅವರ ಧ್ವನಿಯನ್ನು ಯಥಾವತ್ ಅನುಕರಿಸಬಲ್ಲ, ಹಾಡಬಲ್ಲ ಪ್ರತ್ಯೇಕ ಗಾಯಕ. ಬೇರೆ ಯಾವ ಸುಪ್ರಸಿದ್ಧ ಗಾಯಕನ ಹಾಡುಗಾರಿಕೆಗೆ ಈ ಹೆಚ್ಚುಗಾರಿಕೆಯಿದೆಯೇ ಹೇಳಿ? ಇದಲ್ಲವೇ ಅವರ ಗಂಧರ್ವ ಗಾನಕ್ಕೆ ಸಿಕ್ಕ ಸನ್ಮಾನ?

ಕಡೆಯದಾಗಿ ವಾರಪತ್ರಿಕೆಯೊಂದರಲ್ಲಿ ಓದಿದ ಡಾ. ರಾಜ್‌ರ ನೆನಪಿನೊಂದು ತುಣುಕು.

ದಾದಾ ಸಾಹೇಬ್ ಫಾಲ್ಕೆ ಪುರಸ್ಕಾರ ಸ್ವೀಕರಿಸಿ ವಿಮಾನದಲ್ಲಿ ವಾಪಸ್ಸುಬರುತಿದ್ದಾಗ ಬಳಿಯೇ ಕುಳಿತಿದ್ದ ಅವರ ಆತ್ಮೀಯರೇ ಆಗಿದ್ದ ಹಿರಿಯ ಪತ್ರಕರ್ತರೊಬ್ಬರು ಹಸನ್ಮುಖಿಯಾಗಿ ಕುಳಿತಿದ್ದ ರಾಜ್‌ರನ್ನು ಕೇಳಿದರಂತೆ, "ಅಣ್ಣಾವ್ರೇ, ಒಬ್ಬ ನಟನಾಗಿ ಏನೇನೆಲ್ಲ ಸಾಧಿಸಿದ್ದೀರಿ, ಇಷ್ಟು ಎತ್ತರಕ್ಕೆ ಏರಿದ್ದೀರಿ, ಈಗ ಫಾಲ್ಕೆ ಅವಾರ್ಡ್ ಕೂಡ ಬಂದಿದೆ. ಇನ್ನೂ ನಿಮಗೇನಾದರೂ ನಟನಾಗಿ ಸಾಧಿಸಬೇಕಾದುದು ಇದೆಯೇ? ಇನ್ನೂ ಏನಾದರೂ ಆಸೆ/ಕನಸುಗಳಿವೆಯೇ?" ಅದಕ್ಕೆ ರಾಜ್‌ರವರು ಮುಗ್ಧತೆಯಲ್ಲೇ ಮಗುವಿನಂತಹ ಕನಸುಕಂಗಳಲ್ಲಿ ಹೇಳಿದರಂತೆ. "ನನಗೆ ಲತಾ ಮಂಗೇಶ್ಕರ್‌ಜೊತೆಗೆ ಒಂದು ಡ್ಯುಯೆಟ್ ಹಾಡಬೇಕು ಅನ್ನೋ ಕನಸಿದೆ!"

ಆ ಕನಸು ನನಸಾಗಲೇ ಇಲ್ಲ, ಕನಸಾಗಿಯೇ ಉಳಿದುಹೋಯಿತು. ಆದರೆ ನೀವೇ ಹೇಳಿ, ಕೈಗೂಡದಂತಹ ಒಂದು ಕನಸೂ ಇಲ್ಲದ ಜೀವನವೊಂದು ಜೀವನವೇ?

ಆ ಹಿರಿಯರ ಆತ್ಮಕ್ಕೆ ಚಿರಶಾಂತಿಯಿರಲಿ...

ಹ್ಯಾವ್ ಎ ನೈಸ್ ಡೇ

**ಶಿವಕುಮಾರ ಕೆ. ಎಸ್.** shivu_ks@rediffmail.com